ಈಗಾಗಲೇ ಬೈಲಹೊಂಗಲ ಮಾರುಕಟ್ಟೆ ಪ್ರಾಂಗಣದಲ್ಲಿ ರೈತಭವನವಿರುವುದರಿಂದ, ರೈತರಿಗೆ ವಿಶ್ರಾಂತಿ ಗೃಹ ನಿರ್ಮಿಸುವ ಯಾವುದೇ ಯೋಜನೆ ಇರುವುದಿಲ್ಲ.

ಕೃಷಿ ಇಲಾಖೆಯ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ

1680 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1994-95ರಿಂದ1998ರ ಮಾರ್ಚ್ ಅವಧಿಯಲ್ಲಿ ಕೃಷಿ ಇಲಾಖೆಯ ಎಷ್ಟು ಅಧಿಕಾರಿಗಳು ಶಿಸ್ತಿನ ಕ್ರಮಕ್ಕೆ ಒಳಗಾಗಿದ್ದಾರೆ?*

ಆ) *ಅಮಾನತ್ತಿನಲ್ಲಿಡಲಾದ ಅಧಿಕಾರಿಗಳ ಸಂಖ್ಯೆ ಎಷ್ಟು?*

ಇ) *ಎಷ್ಟು ಜನ ಸಿಬ್ಬಂದಿ ವಿರುದ್ಧ ಇಲಾಖಾ ತನಿಖೆ ನಡೆದಿದೆ?*

ಈ) *ಎಷ್ಟು ಜನ ಸಿಬ್ಬಂದಿಯನ್ನು ಕೆಲಸದಿಂದ ವಜಾ ಮಾಡಲಾಗಿದೆ?*

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) 582

ಆ) 219

ಇ) 258

ಈ) 25

ಕುಂದಾಪುರ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ.

1682 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಕುಂದಾಪುರ ತಾಲ್ಲುಕು ಕೇಂದ್ರದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಕ್ಕಾಗಿ ಸ್ಥಳ ಕಾದಿರಿಸಲಾಗಿದೆಯೇ? ಹಾಗಿದ್ದಲ್ಲಿ ಎಲ್ಲಿ ಮತ್ತು ಎಷ್ಟು ಎಕರೆ ಸ್ಥಳವನ್ನು ಕಾದಿರಿಸಲಾಗಿದೆ?*

2. *ಈ ಕಾಮಗಾರಿ ಯಾವಾಗ ಪ್ರಾರಂಭವಾಗುವುದು ಹಾಗೂ ಯಾವಾಗ ಪೂರ್ಣಗೊಳ್ಳುವುದು?*

3. *ಕುಂದಾಪುರ ಬಸ್ ಡಿಪೋ ಲಾಭದಾಯಕವಾಗಿ ನಡೆಯುತ್ತಿದ್ದರೂ ಬಸ್ ನಿಲ್ದಾಣ ನಿರ್ಮಿಸುವಲ್ಲಿ ವಿಳಂಬವಾಗಲು ಕಾರಣವೇನು?*

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) :

1. ನಿವೇಶನ ಪಡೆದುಕೊಳ್ಳಲಾಗಿದೆ. ಕುಂದಾಪುರ ತಾಲ್ಲೂಕು, ಕುಂದಾಪುರ ಕಸಬಾ ಗ್ರಾಮದ ಸರ್ವೆ ಸಂಖ್ಯೆ 46ರಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 17ಕ್ಕೆ ಹೊಂದಿಕೊಂಡಂತೆ 2.ಎಕರೆ 39 ಗುಂಟೆ ನಿವೇಶನವನ್ನು ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ಸಂಸ್ಥೆಯ ವಶಕ್ಕೆ ಪಡೆಯಲಾಗಿದೆ.

2. ಈ ಕೆಲಸಕ್ಕೆ 1998-99ನೇ ಸಾಲಿನ ಆಯವ್ಯಯದಲ್ಲಿ 25 ಲಕ್ಷ ರೂ.ಗಳನ್ನು ಒಳವಡಿಸಲಾಗಿದೆ. ಸದರಿ ಕೆಲಸದ ಅಂದಾಜು ಪಟ್ಟಿಗೆ ಮಂಜೂರಾತಿ ನೀಡಿ ಟೆಂಡರ್ ಕರೆದು ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಸದರಿ ಕೆಲಸವನ್ನು ಪ್ರಾರಂಭಿಸಿದ 2 ವರ್ಷಗಳ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.

3. ಸಾರಿಗೆ ನಿಗಮದ ಒಟ್ಟಾರೆ ಹಣಕಾಸಿನ ಪರಿಸ್ಥಿತಿಯ ಆಧಾರದ ಮೇಲೆ ಆಯವ್ಯಯವನ್ನು ಸಿದ್ದಪಡಿಸಿ ಕಾಮಗಾರಿ ಕೆಲಸವನ್ನು ಕೈಗೊಳ್ಳಲಾಗುವುದು. ಕುಂದಾಪುರದಲ್ಲಿ ಬಸ್ ನಿಲ್ದಾಣದ ಕಾಮಗಾರಿಯನ್ನು ಆದ್ಯತೆ ಮೇರೆಗೆ ಪ್ರಸಕ್ತ ಸಾಲಿನಲ್ಲಿ ಕೈಗೊಳ್ಳಲಾಗುವುದು.

ಗಣಿ ಮತ್ತು ಭೂವಿಜ್ಞಾನ ಪರವಾನಿಗೆ ಪಡೆದ ವಿವರ

1684 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಳೆದ ಮೂರು ವರ್ಷದಿಂದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಕುಂದಾಪುರ ಮತ್ತು ಉಡುಪಿ ತಾಲ್ಲೂಕುಗಳಲ್ಲಿ ಯಾವ ಯಾವ ಉದ್ದೇಶಗಳಿಗೆ ಎಲ್ಲೆಲ್ಲಿ ಕೊರೆಗಳನ್ನು ಕೊಡಲಾಗಿದೆ?*

ಆ) *ಕಳೆದ ಮೂರು ವರ್ಷದಿಂದ ಪರವಾನಗಿ ಪಡೆದು ಕೋರೆ ನಡೆಯಿಸುತ್ತಿರುವವರ ಸಂಪೂರ್ಣ ವಿಳಾಸ ಮತ್ತು ಕೋರೆ ನಡೆಯಿಸುವ ಉದ್ದೇಶ ಹಾಗೂ ಸ್ಥಳದ ಮಾಹಿತಿ ನೀಡುವುದು (ವಿಸ್ತೀರ್ಣ, ಸರ್ವೆ ನಂ. ಗ್ರಾಮ)*

ಇ) *ಕಳೆದ ಮೂರು ವರ್ಷದಿಂದ ಕುಂದಾಪುರ ಮತ್ತು ಉಡುಪಿ ತಾಲ್ಲೂಕಿನಲ್ಲಿ ಈ ಇಲಾಖೆಗೆ ಬಂದಿರುವ ಆದಾಯವೆಷ್ಟು? (ವರ್ಷವಾರು ವಿವರಗಳನ್ನು ನೀಡುವುದು)*

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :

ಅ) ಕಳೆದ ಮೂರು ವರ್ಷಗಳಿಂದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಕುಂದಾಪುರ ಮತ್ತು ಉಡುಪಿ ತಾಲ್ಲೂಕುಗಳಲ್ಲಿ ಈ ಕೆಳಕಂಡ ಕಲ್ಲು ಗಣಿ ಗುತ್ತಿಗೆಗಳನ್ನು ನೀಡಿದೆ.